**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: ಸರ್ಕಾರದ ಪ್ರಧಾನ ಕಾರ್ಯದರ್ಶಿ ಮತ್ತು ಕಾರ್ಯದರ್ಶಿಗಳ ನಿವಾಸದ ದೂರವಾಣಿಗಳಿಗೆ ಬ್ರಾಡ್‌ಬ್ಯಾಂಡ್ ಸೌಲಭ್ಯವನ್ನು ಒದಗಿಸುವ ಬಗ್ಗೆ

ಓದಲಾಗಿದೆ:
1. ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 517 ಡಿಟಿಎನ್ 2006, ದಿನಾಂಕ: 22-11-2006
2. ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 20 ಡಿಟಿಎನ್ 2007, ದಿನಾಂಕ: 24-10-2007
3. ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 598 ಡಿಟಿಎನ್ 2008, ದಿನಾಂಕ:18/05/2009.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಾರ್ವಜನಿಕ ಉದ್ದಿಮೆಗಳ ಇಲಾಖೆರವರ ಅರೆ ಸರ್ಕಾರಿ ಪತ್ರ ಸಂಖ್ಯೆ:DPE 387 PRS 2012, ದಿನಾಂಕ:04-12-2012.

*******

ಪ್ರಸ್ತಾವನೆ:-

ಸರ್ಕಾರದ ಕಾರ್ಯದರ್ಶಿ ಹಾಗೂ ಅದಕ್ಕಿಂತ ಮೇಲ್ಪಟ್ಟವರ (ಕೋರಿಕೆ ಸಲ್ಲಿಸುವ) ನಿವಾಸದ ದೂರವಾಣಿಗಳಿಗೆ ಬಿ.ಎಸ್.ಎನ್.ಎಲ್ ಸಂಸ್ಥೆಯ ಬ್ರಾಡ್ ಬ್ಯಾಂಡ್ ಡಾಟಾ-1 ಇಂಟರ್ ನೆಟ್ ಸೌಲಭ್ಯವನ್ನು ಮೇಲೆ ಓದಲಾದ, ಕ್ರಮಾಂಕ (1) ಮತ್ತು (2)ರ ಆದೇಶಗಳನ್ವಯ ಒದಗಿಸಲಾಗುತ್ತಿದೆ. ಸರ್ಕಾರದ ಪ್ರಧಾನ ಕಾರ್ಯದರ್ಶಿ ಮತ್ತು ಕಾರ್ಯದರ್ಶಿಗಳ ನಿವಾಸದ ದೂರವಾಣಿಗೆ ದಿನಾಂಕ:18/05/2009ರಿಂದ ಜಾರಿಗೆ ಬರುವಂತೆ ಬಿ.ಎಸ್.ಎನ್.ಎಲ್. ಸಂಸ್ಥೆ ವತಿಯಿಂದ ಹೋಮ್ 750 ಬ್ರಾಡ್‌ಬ್ಯಾಂಡ್ ಇಂಟರ್ ನೆಟ್ ಸೌಲಭ್ಯ ಒದಗಿಸಲು ಮೇಲೆ ಓದಲಾದ ಕ್ರಮಾಂಕ(3)ರ ಸರ್ಕಾರಿ ಆದೇಶದಲ್ಲಿ ಆದೇಶಿಸಲಾಗಿದೆ.

ಸರ್ಕಾರದ ಪ್ರಧಾನ ಕಾರ್ಯದರ್ಶಿ ಹಾಗೂ ಕಾರ್ಯದರ್ಶಿಗಳ ನಿವಾಸಕ್ಕೆ ಒದಗಿಸಲಾಗುತ್ತಿರುವ ಬಿ.ಎಸ್.ಎನ್.ಎಲ್. ಹೋಮ್ 750 ಬ್ರಾಡ್ ಬ್ಯಾಂಡ್ ಸೌಲಭ್ಯಕ್ಕೆ ಬದಲಾಗಿ ಬ್ರಾಡ್‌ಬ್ಯಾಂಡ್ ಸೌಲಭ್ಯವನ್ನು ಯಾವುದೇ ಸೇವಾ ಸಂಸ್ಥೆಯಿಂದ ಪಡೆಯಲು ಹಾಗೂ ಇದನ್ನು ಯಾವುದೇ ಸ್ಕೀಮ್‌ಗೆ ಒಳಪಡಿಸದೆ ಬ್ರಾಡ್ ಬ್ಯಾಂಡ್ 100 ಜಿ.ಬಿ. ಡಾಟಾ ಟ್ರಾನ್ಸ್‌ಫರ್‌ಗೆ ಸೀಮಿತಗೊಳಿಸಿ ತಿಂಗಳಿಗೆ ರೂ.1,500/-ಕ್ಕೆ ನಿಗದಿಪಡಿಸಿ ಸೌಲಭ್ಯವನ್ನು ಒದಗಿಸುವಂತೆ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಾರ್ವಜನಿಕ ಉದ್ದಿಮೆಗಳ ಇಲಾಖೆ ಅವರು ಮೇಲೆ ಓದಲಾದ ಕ್ರಮಾಂಕ (4)ರ ಅರೆ ಸರ್ಕಾರಿ ಪತ್ರದಲ್ಲಿ ಕೋರಿರುತ್ತಾರೆ. ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ:-

## ಆದೇಶ ಸಂಖ್ಯೆ: ಸಿಆಸುಇ 407 ಡಿಟಿಎನ್ 2012,ಬೆಂಗಳೂರು, ದಿನಾಂಕ: 16ನೇ ಏಪ್ರಿಲ್ 2013.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 598 ಡಿಟಿಎನ್ 2008, ದಿನಾಂಕ:28.05.2009ರಲ್ಲಿ ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳ ನಿವಾಸದ ದೂರವಾಣಿಗಳಿಗೆ ಒದಗಿಸಲಾಗುತ್ತಿರುವ

ಬಿ.ಎಸ್.ಎನ್.ಎಲ್. ಹೋಂ-750 ಬ್ರಾಡ್ ಬ್ಯಾಂಡ್ ಸೌಲಭ್ಯಕ್ಕೆ ಬದಲಾಗಿ, ಯಾವುದೇ ಸೇವಾ ಸಂಸ್ಥೆಯಿಂದ ಸೌಲಭ್ಯವನ್ನು ಪಡೆಯಲು ಹಾಗೂ ಇದಕ್ಕೆ ಯಾವುದೇ ಸ್ಕೀಂಗೆ ನಿಗಧಿಪಡಿಸದೆ ಬ್ರಾಡ್ ಬ್ಯಾಂಡ್ 100 ಜಿಬಿ ಡಾಟಾ ಟ್ರಾನ್ಸ್‌ಫರ್‌ಗೆ ಸೀಮಿತಗೊಳಿಸಿ ಈ ಆದೇಶ ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ತಿಂಗಳಿಗೆ ಗರಿಷ್ಠ ರೂ.1500/-(ರೂಪಾಯಿ ಒಂದು ಸಾವಿರದ ಐದುನೂರು ಮಾತ್ರ)ಗಳಿಗೆ ನಿಗಧಿಪಡಿಸಲು ಸರ್ಕಾರ ಮಂಜೂರಾತಿ ನೀಡಿದೆ.

ಮೇಲ್ಕಂಡ ವೆಚ್ಚವನ್ನು ಆಯವ್ಯಯದ ಲೆಕ್ಕಶೀರ್ಷಿಕೆ "2052-00-090-0-01-052-(ಯೋಜನೇತರ) ದೂರವಾಣಿ ವೆಚ್ಚಗಳು" ಇದರಡಿಯಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂ: ಆಇ 80 ವೆಚ್ಚ-12/13 ದಿನಾಂಕ:06-03-2013ರಲ್ಲಿ ನೀಡಿರುವ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

6/4

(ಎಲ್. ಗಂಗಾಧರ)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಆಸುಇ (ಕಾರ್ಯಕಾರಿ)

6/04

ಗೆ,

1. ಮಹಾಲೇಖಪಾಲರು ಕರ್ನಾಟಕ, (ಎ ಅಂಡ್ ಇ) ಬೆಂಗಳೂರು
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ವಿಧಾನಸೌಧ
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು
4. ಸರ್ಕಾರದ ಎಲ್ಲಾ ಪ್ರಧಾನಕಾರ್ಯದರ್ಶಿಗಳ:ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು
5. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು
6. ಸರ್ಕಾರದ ಉಪ ಕಾರ್ಯದರ್ಶಿ-2, ಆರ್ಥಿಕ ಇಲಾಖೆ
7. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು:ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು
8. ಖಜಾನಾಧಿಕಾರಿ, ಕರ್ನಾಟಕ ರಾಜ್ಯ ಹುಜೂರ್ ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು-2
9. ಸರ್ಕಾರದ ಅಧೀನ ಕಾರ್ಯದರ್ಶಿ (ಲೆಕ್ಕಪತ್ರ-1 /2) ಸಿಆಸು ಇಲಾಖೆ
10. ಸರ್ಕಾರದ ಅಧೀನ ಕಾರ್ಯದರ್ಶಿ (ವೆಚ್ಚ-12) ಸಿಆಸು ಇಲಾಖೆ
11. ಶಾಖಾ ರಕ್ಷಾ ಕಡತ
12. ಕಚೇರಿ ಪ್ರತಿ
13. ಹೆಚ್ಚುವರಿ ಪ್ರತಿಗಳು